C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. 115/2021

ದಿನಾಂಕಃ 21.06.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಸಿ. ಡಬ್ಲ್ಯು :8 ಪಿ. ಡಬ್ಲ್ಯು : 10

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ |
| ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | 47 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸ | ಬೆಂಗಳೂರು. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ 2 ಗೊತ್ತು. ಚಾಸಾ 1 ರಿಂದ 7 ರವರು ಗೊತ್ತು. ಆರೋಪಿತ ಗೊತ್ತು, ಆತನ ಹೆಸರು ದಿಲೀಪ. ನಾನು ಈಗ ಬೆಂಗಳೂರಿನಲ್ಲಿ ವಾಸವಾದ್ದೇನೆ. ನಮ್ಮ ಊರು ಕೃಷ್ಣಾಪುರ . ಬೆಂಗಳೂರಿನಲ್ಲಿ ಸುಮಾರು 15 ವರ್ಷದಿಂದ ವಾಸ ಮಾಡುತ್ತಿದ್ದೇನೆ. ಕೃಷ್ಣಾ ಪುರಕ್ಕೆ ಆಗಾಗ ಬಂದು ಹೋಗುತ್ತಿರುತ್ತೇನೆ. ಚಾಸಾ 2 ರವರು ಕೃಷ್ಣಾಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಚಾಸಾ 2 ರವರು ರವರು ಕೆಂಪಣ್ಣ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇದ್ದರು. ಕೆಂಪಣ್ಣ ಈಗ ತೀರಿಕೊಂಡು ಸುಮಾರು 5-6 ವರ್ಷಗಳ ಆಗಿದೆ. ಕೆಂಪಣ್ಣ ರವರ ಸಂಸಾರ ವಳಗೆರೆಪುರದಲ್ಲಿ ಇದೆ. ಆರೋಪಿತ ದಿಲೀಪ ಬೆಂಗಳೂರಿನಲ್ಲಿ ಇದ್ದಾರೆ. ಚಸಾ 2 ರವರಿಗೆ ಆರೋಪಿತ ಅಣ್ಣನ ಮಗ ಆಗಬೇಕು. ಆರೋಪಿತ ಮತ್ತು ಚಾಸಾ 2 ರವರಿಗೆ ಸೇರಿದ ಆಸ್ತಿ ಕೃಷ್ಣಾಪುರ ದಲ್ಲಿದೆ. ಆರೋಪಿತ ಮತ್ತು ಚಾಸಾ 2 ರವರಿಗೆ ಸೇರಿದ ತೆಂಗಿನ ತೋಟ ಮತ್ತು ಖಾಲಿ ಜಮೀನು ಕೃಷ್ಣಾಪುರ ದಲ್ಲಿದೆ. ಕೃಷ್ಣಾಪುರದಲ್ಲಿ ನಮ್ಮ ಮನೆಯಿಂದ ಚಾಸಾ 2 ರವರು ಬಾಡಿಗೆಗೆ ಇದ್ದ ಮನೆ 200 ಮೀಟರ್ ದೂರ ಇತ್ತು. ನಮ್ಮ ಮನೆಗೂ ಮತ್ತು ಚಾಸಾ 2 ರವರ ಮನೆಯ ಮಧ್ಯದಲ್ಲಿ ಚಾಸಾ 1 ರವರ ಮನೆ ಇದೆ.

2) ಆರೋಪಿತ ಮತ್ತು ಚಾಸಾ 2 ರವರು ತೆಂಗಿನ ಕಾಯಿ ವಿಚಾರದಲ್ಲಿ ಜಗಳ ಮಾಡಿಕೊಂಡಿದ್ದರು. ಈ ವಿಚಾರ ನನಗೆ ರಾತ್ರಿ 10.30 – 11.00 ಗಂಟೆಗೆ ಗೊತ್ತಾಯಿತು. ಆಗ ನಾನು ನನ್ನ ಮನೆಯಲ್ಲಿ ಇದ್ದೆನು. ಆಗ ಜೋರಾಗಿ ಶಬ್ದ ಚಾಸಾ 1 ರವರ ಮನೆ ಕಡೆಯಿಂದ

ಕೇಳಿಸಿತ್ತು. ಘಟನೆಯೆಲ್ಲ ಆಗಿತ್ತು ಆಗ ನಾನು ಅಲ್ಲಿಗೆ ಹೋದೆನು. ನಾನು ಚಾಸಾ 1 ರವರ ಮನೆಯ ಹತ್ತಿರ ಹೋದೆನು. ಅಲ್ಲಿ ಚಾಸಾ 4 ರಿಂದ ಚಾಸಾ 7 ರವರು ಮತ್ತು ಚಾಸಾ 9 ರವರು ಅಲ್ಲಿ ಇದ್ದರು. ನಾನು ಹೋಗಿ ನೋಡಿದಾಗ ಚಾಸಾ 2 ಸತೀಶ್ ರ ಬಲಗೈಗೆ ರಕ್ತ ಹರಿಯುತ್ತಿತ್ತು. ಚಾಸಾ 6 ಮತ್ತು 7 ರವರು ಆ್ಯಂಬುಲೆನ್ಸ್ ನ್ನು ಕರೆಸಿಕೊಂಡು ಚಾಸಾ 2 ರವರನ್ನು ಬಿ ಜಿ ಆಸ್ಪತ್ರೆಗೆ ಕಳುಹಿಸಿದರು. ನಾನು ಚಾಸಾ 1 ರ ಮನೆಯ ಬಳಿ ಹೋದಾಗ ಚಾಸಾ 1 ರವರು ಇರುವುದನ್ನು ನಾನು ಗಮನಿಸಲಿಲ್ಲ, ಅವರ ಮಗ ಅಲ್ಲಿ ಇದ್ದರು. ಚಾಸಾ 2 ರವರಿಗೆ ಹೇಗೆ ಗಾಯ ಆಯಿತು ಎಂದು ನಾನು ಖುದ್ದಾಗಿ ವಿಚಾರ ಮಾಡಲಿಲ್ಲ. ಆದರೆ ಬೇರೆಯವರು , ಆತನ ಅಣ್ಣನ ಮಗ ದಿಲೀಪ (ಆರೋಪಿ) ಬಂದು ಚಾಸಾ 2 ರವರ ಕೈಯ್ಯನ್ನು ಜವನಿ ಕುಡ್ಲಿನಿಂದ ಕಡಿದಿದ್ದಾನೆ ಎಂದು ಹೇಳುತ್ತಿದ್ದರು. ಸದರಿ ಘಟನೆಯು ಕೃಷ್ಣಾಪುರದಲ್ಲಿ ಚಾಸಾ 2 ರವರ ಬಾಡಿಗೆ ಮನೆಯಲ್ಲಿ ಆಗಿತ್ತು ಎಂದು ಗೊತ್ತಾಯಿತು. ಅಲ್ಲಿಗೆ ಹೋದಾಗ, ಎಷ್ಟುಹೊತ್ತಿನಲ್ಲಿ ಗಲಾಟೆಯಾಗಿತ್ತು, ಚಾಸಾ 2 ರವರಿಗೆ ಏಟಾಗಿತ್ತು ಎಂದು ಗೊತ್ತಾಗಲಿಲ್ಲ. ನಂತರವೂ ಸಹ ಚಾಸಾ 2 ರವರಿಂದ ನಾನು ಮಾಹಿತಿಯನ್ನು ತೆಗೆದುಕೊಳ್ಳಲ್ಲಿಲ್ಲ. ನಾನು ಚಾಸಾ 2 ರವರನ್ನು ಆ ದಿನ ಏನು ಗಲಾಟೆ ಯಾಗಿತ್ತು ಎಂದು ವಿಚಾರಿಸಲಿಲ್ಲ. ಆ ಸಮಯದಲ್ಲಿ ಚಾಸಾ 3 ರವರು ಬೆಂಗಳೂರಿನಲ್ಲಿ ವಾಸವಾಗಿದ್ದರು. ಆರೋಪಿಯು ಬೆಂಗಳೂರಿನಲ್ಲಿ ವಾಸವಾಗಿದ್ದರು. ಆರೋಪಿತ ಬೆಂಗಳೂರಿನಿಂದ ಕೃಷ್ಣಾಪುರಕ್ಕೆ ಯಾಕೆ ಬಂದಿದ್ದರು ಎಂದು ಗೊತ್ತಿಲ್ಲ. ಪೊಲೀಸರು ಘಟನೆಯ ಬಗ್ಗೆ ನನ್ನನ್ನು ವಿಚಾರ ಮಾಡಲಿಲ್ಲ ಮತ್ತು ನನ್ನ ಹೇಳಿಕೆಯನ್ನು ಪಡೆಯಲಿಲ್ಲ. ಸದರಿ ಘಟನೆಯು ಕೊರೋನಾ ಬಂದಿದ್ದ 2020 ನೇ ಇಸವಿಯಲ್ಲಿ ಆಗಿದೆ. ಕೊರೋನಾ ಬಂದಿತ್ತು ಎಂದು ನಾನು ಕೃಷ್ಣಾಪುರಕ್ಕೆ ಬಂದು ಅಲ್ಲಿ ವಾಸವಾಗಿದ್ದೆನು.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ. ನಾನು ಆ ದಿನ ರಾತ್ರಿ ಬೋರೇಗೌಡರ ಮನೆಯ ಹತ್ತಿರ ಹೋಗಿದ್ದಾಗ ಅ ಲ್ಲಿ ಪೆಟ್ಟಾಗಿದ್ದ ಚಾಸಾ 2 ರವರನ್ನು ವಿಚಾರ ಮಾಡಿ ಆರೋಪಿತನು ಆಗಾಗ್ಗೆ ಊರಿಗೆ ಬಂದು ತೆಂಗಿನ ಕಾಯಿಗಳನ್ನುಕಿತ್ತುಕೊಂಡು ಹೋಗುತ್ತಿದ್ದು, ಆ ದಿನವೂ ಸಹ ಸಂಜೆ 4.00 ರಲ್ಲಿ ತೋಟಕ್ಕೆ ಬಂದು ಕಾಯಿಗಳನ್ನು ಗುಡ್ಡೆ ಹಾಕಿದ್ದ, ನಾನು ಅವನು ಗುಡ್ಡೆ ಹಾಕಿದ್ದ

ಕಾಯಿಗಳನ್ನು ತುಂಬಿಕೊಂಡು ಬಂದೆ, ಆಗ ಆರೋಪಿತನು ನನ್ನನ್ನು ಗುರಾಯಿಸಿಕೊಂಡು ನೋಡುತ್ತಿದ್ದ, ನಂತರದಲ್ಲಿ ರಾತ್ರಿ 10.50 ರ ಸಮಯದಲ್ಲಿ ನಾನು ಬಾಡಿಗೆಯ ಮನೆಯಲ್ಲಿ ವಾಸವಿದ್ದ ಮನೆಯ ಬಾಗಿಲನ್ನು ತಟ್ಟಿ, ನನ್ನನ್ನು ಹೊರಗಡೆ ಕರೆದು ಏಕಾಏಕಿ ಅವನ ಕೈಯ್ಯಲ್ಲಿ ಇದ್ದ ಕುಡಗೊಲಿನಿಂದ ಬೋಳಿ ಮಗನೇ ನಿನ್ನನ್ನು ಕತ್ತರಿಸಿ ಸಾಯಿಸುತ್ತೇನೆಂದು ಹೇಳಿ ಕುತ್ತಿಗೆಗೆ ಬೀಸಿದ ಆಗ ನಾನು ಬಲ ಕೈ ಯನ್ನು ಅಡ್ಡ ಕೊಡಲಾಗಿ, ಏಟು ನನ್ನ ಹಣೆಗೆ ಗೀರಿ ಬಲ ಕೈ ಕತ್ತರಿಸಿತು ಎಂದು ಸತೀಶ್ ಚಾಸಾ 2 ರವರು ತಿಳಿಸಿದ್ದರು ಎಂದರೆ ಸರಿಯಲ್ಲ.

ಈ ರಿತೀಯಾಗಿ ಚಾಸಾ 2 ರವರಿಂದ ಘಟನೆಯ ಬಗ್ಗೆ ಖುದ್ದು ಮಾಹಿತಿ ತಿಳಿದಿರುವುದಾಗಿ ದಿಃ 05.06.2020 ರಂದು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 13 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್.ಎನ್. ವಕೀಲರಿಂದಃ</u>

ಕೊರೋನಾ ಬಂದಿದ್ದ ಸಮಯದಲ್ಲಿ ವಾಹನ ಸಂಚಾರಗಳು ಇರಲಿಲ್ಲ ಎಂದರೆ ಸರಿ. ಹಾಗೂ ಆ ಸಮಯದಲ್ಲಿ ಲಾಕ್ ಡೌನ್ ಇತ್ತು ಎಂದರೆ ಸಾಕ್ಷಿಯು ಗಡುವು ಕೊಟ್ಟಿದ್ದ ಸಮಯದಲ್ಲಿ ನಾನು ಊರಿಗೆ ಬಂದು ಸೇರಿಕೊಂಡಿದ್ದೆ ಎಂದು ನುಡಿಯುತ್ತಾರೆ. ನಾನು ಯಾವ ದಿನಾಂಕದಲ್ಲಿ ಊರಿಗೆ ಬಂದು ಸೇರಿಕೊಂಡಿದ್ದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಚಾಸಾ 2 ರವರು ಕೃಷ್ಣಾಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದ ವಿಷಯ ನನಗೆ ಖುದ್ದಾಗಿ ಗೊತ್ತಿತ್ತು. ಚಾಸಾ 2 ರವರು ಬಾಡಿಗೆಗೆ ಇದ್ದ ಕೆಂಪಣ್ಣ ನವರ ಮನೆಯ ಪಕ್ಕದಲ್ಲಿ ಚಾಸಾ 1 ರವರ ಮನೆ, ಶಂಕರೆಗೌಡ ರ ಮನೆ ಮತ್ತು ಮಧ್ಯದಲ್ಲಿ ಖಾಲಿ ಸೈಟು ಇತ್ತು. ಚಾಸಾ 2 ರವರ ಬಾಡಿಗೆ ಮನೆಯಿಂದ ಚಾಸಾ 1 ರವರ ಮನೆಗೆ 100 ಅಡಿ ದೂರ ಇರಬಹುದು. ಚಾಸಾ 2 ರವರು ಇದ್ದ ಬಾಡಿಗೆ ಮನೆಯ ಚೆಕ್ ಬಂದಿಯನ್ನು ಹೇಳಲು ಆಗುವುದಿಲ್ಲ.

ನಾನು ಚಾಸಾ 1 ರವರ ಮನಗೆ ಹೋಗುವಷರಲ್ಲಿ ಅಲ್ಲಿ 6-7 ಜನರು ಇದ್ದರು. ನಾನು ಹೋದಂತಹ ಸಮಯದಲ್ಲಿ ಚಾಸಾ 1 ರವರು ಇದ್ದರೋ ಇಲ್ಲವೋ ಎಂದು ನೆನಪಿಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಏನಾದರೂ ಘಟನೆಯು ನಡೆದಾಗ ಅಲ್ಲಿಯ ಹಳ್ಳಿಯಜನರು ಸೇರಿಕೊಳ್ಳುತ್ತಾರೆ ಎಂದರೆ ಗೊತ್ತಿಲ್ಲ. ಆ್ಯಂಬುಲೆನ್ಸ ನ್ನು ಯಾರು ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ಏನು ಕೆಲಸ

ಮಾಡುತ್ತಾರೆ ಎಂದು ಗೊತ್ತಿಲ್ಲ, ಚಾಸಾ 2 ರವರು ಊರಿಗೆ ಬಂದು ತೋಟವನ್ನು ನೊಡಿಕೊಂಡಿದ್ದರು, ಕೆಲಸಕ್ಕೆ ಹೋಗುತ್ತಿರಲಿಲ್ಲ. ಸುಮಾರು ಹತ್ತಾರು ವರ್ಷಗಳಿಂದ ಚಾಸಾ 2 ರವರು ಊರಿನಲ್ಲಿ ವಾಸವಿದ್ದಾರೆ. ಚಾಸಾ 3 ರವರು ಚಾಸಾ 2 ರವರ ಜೊತೆಯಲ್ಲಿ ಕೃಷ್ಣಾಪುರದಲ್ಲಿ ಒಟ್ಟಿಗೆ ವಾಸವಾಗಿದ್ದರಾ ಇಲ್ಲವೋ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಆ ದಿನ ಕೃಷ್ಣಾಪುರದಲ್ಲಿ ಗ್ರಾಮದಲ್ಲಿ ವಾಸವಾಗಿರಿಲಿಲ್ಲ ಹಾಗೂ ಬೆಂಗಳೂರಿನಲ್ಲಿ ವಾಸವಾಗಿದ್ದೆನು ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ನನಗೆ ಘಟನೆಯ ಬಗ್ಗೆ ನನಗೆ ಏನು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಆ್ಯಂಬುಲೆನ್ಸ ನಲ್ಲಿ ಚಾಸಾ 6, 7 ಮತ್ತು ಅಶೋಕ ರವರು ಹೋದರು. ಸಾಕ್ಷಿಯು ಮುಂದುವರೆದು 6-7 ಜನರು ಆ್ಯಂಬುಲೆನ್ಸ ನಲ್ಲಿ ಹೋದರು ಎಂದು ಹೇಳುತ್ತಾರೆ. 6-7 ಜನರ ಪೈಕಿ 3 ಜನರ ಹೆಸರನ್ನು ಹೇಳಿದ್ದೇನೆ ಉಳಿದವರ ಹೆಸರು ನೆನಪಿಲ್ಲ. ಎಷ್ಟು ಗಂಟೆಗೆ ಆ್ಯಂಬುಲೆನ್ಸ ನಮ್ಮ ಊರಿಗೆ ಬಂತು ಎಂದು ನಾನು ಸಮಯವನ್ನು ಗಮನಿಸಲಿಲ್ಲ. ಆ್ಯಂಬುಲೆನ್ಸ ನಮ್ಮ ಊರಿಂದ ಎಷ್ಟು ಗಂಟೆಗೆ ಹೊರಟಿತ್ತು ಎಂದು ಗೊತ್ತಿಲ್ಲ. ಪೊಲೀಸನವರಿಗೆ ಗಲಾಟೆ ಬಗ್ಗೆ ಯಾರಾದರೂ ತಿಳಿಸಿದ್ದರ ಎಂಬುದನ್ನು ನಾನು ಗಮನಿಸಲಿಲ್ಲ. ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.